LAC No.1/2022
PW-1

ದಿನಾಂಕಃ 23.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ. ಶ್ರೀ.ಬಿ.ಬಿ.ಹೆಚ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸರಿ ಇದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ.

1) ಪ್ರೊಟೇಪ್ಟ ಪೇಟಿಶನ ಕಾಪಿಯನ್ನು ನಿ.ಪಿ.1 ಎಂದು ಗುರುತಿಸಲಾಯಿತು.

2) ಅಮೆಂಡಮೆಂಟ್ ಪ್ರೊಟೇಪ್ಟ ಪೇಟಿಶನ ಕಾಪಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

3) ಅವಾರ್ಡ ನೋಟಿಸನ್ನು ಹಾಜರಪಡಿಸಿದ್ದು ನಿ.ಪಿ.2 ಎಂದು ಗುರುತಿಸಲಾಯಿತು.

4) ಅವಾರ್ಡ ಕಾಪಿ ಹಾಜರಪಡಿಸಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು.

5) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.49/2021 ದಿಃ 02.04.2025 ಪ್ರಕರಣದ ತೀರ್ಪು ಮತ್ತು ಅವಾರ್ಡನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು.

6) ವಿಜಯಪುರ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.422/2020 ದಿಃ 13.10.2023 ರ ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು.

7) ವಿಜಯಪುರ ಜಿಲ್ಲಾ ಒಂದನೇ ಹೆಚ್ಚುವರಿ ನ್ಯಾಯಾಲಯದ ಎಲ್.ಎ.ಸಿ. ನಂ.443/2020 ದಿಃ 21.08.2024 ರ ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು.

8) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.12/2022 ದಿಃ 25.02.2026 ಪ್ರಕರಣದ ತೀರ್ಪು ದೃಢೀಕೃತ ನಕಲು

ಹಾಜರಪಡಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು.

9) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.26/2022 ದಿಃ 25.02.2026 ಪ್ರಕರಣದ ತೀರ್ಪು ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು.

10) ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗ್ರಾಮದ ಮರಡಿ ಜಮೀನಿನ ದಿಃ 09.02.2017 ರ ಖರೀದಿ ಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

11) ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗ್ರಾಮದ ಮರಡಿ ಜಮೀನಿನ ದಿಃ 09.06.2016 ರ ಖರೀದಿ ಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು.

12) ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗ್ರಾಮದ ಮರಡಿ ಜಮೀನಿನ ದಿಃ 09.11.2015 ರ ಖರೀದಿ ಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು.

13) ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಹೋಬಳಿಯ ತಾಳಿಕೋಟಿ ಗ್ರಾಮದ ದಿಃ 20.05.2016 ರ ಖರೀದಿ ಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು 1 ನೇ ಎದುರುದಾರರ ಪರವಾಗಿ ಶ್ರೀ. ಎಮ್. ಎಸ್. ಪಾಟೀಲ ವಕೀಲರಿಂದ</u>

ನನ್ನ ಜಮೀನು ಸರ್ವೆ ನಂಬರ 26/3 ಇರುತ್ತದೆ. ಇದರಲ್ಲಿ 02 ಎಕರೆ 04 ಗುಂಟೆ ಇರುತ್ತದೆ ಇದರಲ್ಲಿ 07 ಗುಂಟೆ ಜಮೀನನ್ನು ಸರ್ಕಾರದವರು ಪೈಪಲೈನಗಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸರ್ಕಾರದವರು ಸರಿಯಾದ ಪರಿಹಾರ ಧನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಕರಾರು ಅರ್ಜಿಯನ್ನು ಕಾಲಮಿತಿಯಲ್ಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಕಪ್ಪು ಮಣ್ಣಿನಿಂದ ಕುಡಿದ ಜಮೀನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ತೊಗರಿ,

ಸೂರ್ಯಕಾಂತಿ, ಹತ್ತಿ ಹಾಗೂ 2ನೇ ಬೆಳೆ. ಹಿಂಗಾರಿ ಅಂತಾ ಗೋಧಿ, ಕಡಲೆ, ಕುಸುಬೆ ಇತ್ಯಾದಿ ಬೆಳೆಯುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೊಗರಿ ಪ್ರತಿ ಎಕರೆಗೆ 15-20 ಕ್ವಿಂಟಲ್ ಬೆಳೆಯುತ್ತೇನೆ, ಹತ್ತಿಯನ್ನು ಪ್ರತಿ ಎಕರೆಗೆ 10-15 ಕ್ವಿಂಟಲ್, ಸೂರ್ಯಕಾಂತಿ ಪ್ರತಿ ಎಕರೆಗೆ 10-15 ಕ್ವಿಂಟಲ, ಜೋಳ ಪ್ರತಿ ಎಕರೆಗೆ 20 ಕ್ವಿಂಟಲ, ಗೋಧಿ ಪ್ರತಿ ಎಕರೆಗೆ 10 ಕ್ವಿಂಟಲ ಬೆಳೆಯುುತ್ತಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಳುವರಿ ಪ್ರಮಾಣ ಪತ್ರ ಮತ್ತು ಮಾರುಕಟ್ಟೆ ದರ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಈ ಎಲ್ಲ ಬೆಳೆಗಳನ್ನು ಪ್ರತಿ ಎಕರೆಗೆ 2 ರಿಂದ 3 ಲಕ್ಷ ರೂಪಾಯಿಗಳು ಆದಾಯ ಬರುತ್ತಿತ್ತು ಎಂದು ಪರಿಗಣಿಸಬೇಕೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲು ಕೊಟ್ಟಂತಹ ರೂ.75000/- ಪರಿಹಾರ ಧನ ಸರಿಯಾಗಿ ಇರುತ್ತದೆ ಎಂದರೆ ಸರಿಯಲ್ಲ.

ಅದೇ ರೀತಿ ವಿಜಯಪುರ ಜಿಲ್ಲೆಯ ಗ್ರಾಮಗಳಾದ ಮಸ್ಕನಾಳ, ಬೀಳೆಬಾವಿ ಹಾಗೂ ತಾಳಿಕೋಟಿ ಜಮೀನು ಮತ್ತು ನನ್ನ ಜಮೀನು ಒಂದೇ ತರಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಿಜಯಪುರ ಮಾನ್ಯ ನ್ಯಾಯಾಲಯದಲ್ಲಿ ಪ್ರತಿ ಎಕರೆಗೆ ರೂ. 8,00,000 ಲಕ್ಷ ರೂಪಾಯಿ ಪರಿಹಾರ ಧನ ಕೊಟ್ಟಿರುತ್ತಾರೆ, ಎಲ್.ಎ.ಸಿ ನಂಬರ 446/2020, 439/2020, 422/2020, 442/2020 ರ ಅಪೀಲು ಮಾಡಲು ಯೋಗ್ಯ ಪ್ರಕರಣ ಅಲ್ಲ ಎಂದು ಅಭಿಪ್ರಾಯ ಕೊಟ್ಟಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಮಾನ್ಯ ಯಾದಗಿರಿ ಜಿಲ್ಲಾ ನ್ಯಾಯಾಲಯದಲ್ಲಿ ಎಲ್.ಎ.ಸಿ ನಂಬರ 8/2022, 106/2022, 50/2022, 42/2022, 12/2022, 26/2022 ಈ ಪ್ರಕರಣದಲ್ಲಿ ರೂ. 8,40,000/- ಲಕ್ಷಗಳನ್ನು ನಿಗದಿ ಪಡಿಸಿದ್ದು, ಇದೇ ಉದ್ದೇಶಕ್ಕಾಗಿ ಈ ಕೇಸಿನಲ್ಲಿ ಭೂ ಪರಿಹಾರ ಕೇಳುವುದು ತಪ್ಪು ಎಂದರೆ ಸರಿಯಲ್ಲ. ಪರಸ್ಪರ ಆ ಭೂಮಿ ಮತ್ತು ನನ್ನ ಜಮೀನು ಭಿನ್ನವಾಗಿದ್ದರಿಂದ ಆ ಪರಿಹಾರ ಧನ ಪಡೆಯಲು

ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲ ದಾಖಲಾತಿಗಳನ್ನು ಈ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಭೂಮಿಯನ್ನು ಮತ್ತು ದಾಖಲೆಗಳನ್ನು ಪರೀಶಿಲಿಸಿ ಸರ್ಕಾರದವರು ವೈಜ್ಞಾನಿಕವಾಗಿ ಭೂಪರಿಹಾರ ಧನವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ಪ್ರತಿ ಎಕರೆಗೆ 70,00,000/- ಲಕ್ಷ ರೂಪಾಯಿ ಇರುತ್ತದೆ ಅಂತಾ ಕೇಳುವುದು ಸರಿಯಲ್ಲ. ಈ ಮೊದಲು ಸರ್ಕಾರದವರು ಕೊಟ್ಟಂತ ಪರಿಹಾರದ ಹಣ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹೆಚ್ಚಿಗೆ ಪರಿಹಾರ ಹಣ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರ ಮತ್ತು ಖಾಸಗಿ ಕಂಪನಿಯವರು ಹೆಚ್ಚಿಗೆ ನಿಗದಿ ಮಾಡಿದ್ದು ಅದಕ್ಕೆ ಸಂಬಂಧ ಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ.

2. ನಿ.ಪಿ.3 ನೋಡಿದ್ದು ಅದು ಐ-ತೀರ್ಪು ಇದ್ದು, ಅದರಲ್ಲಿನ ಮಾರುಕಟ್ಟೆ ಮೌಲ್ಯ ಮಾಪನ (ಬೆಲೆ) ನಿಗದಿಪಡಿಸಲಾದ ಪ್ಯಾರಾ ನಂ.1, ಅದನ್ನು **ನಿ.ಆರ್.1** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು 2 ನೇ ಎದುರುದಾರರ ಪರವಾಗಿ ಡಿ.ಜಿ.ಪಿ ವಕೀಲರಿಂದ</u>

ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ. ಅನುಮತಿಸಲಾಯಿತು.

<u>ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ. ಎಸ್. ಎನ್. ವಕೀಲರಿಂದ</u>

-ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

LAC No.1/2022
PW-1

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಯಾದಗಿರಿ.